<u>ದಿನಾಂಕ **02.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್. ಸಿ ವಕೀಲರಿಂದ ಪ್ರತಿವಾದಿ ಪರ:</u>

ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇದೆ. ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಮನೆಗಳನ್ನು ಕಟ್ಟಿದ್ದಾರೆ. ಕೆಲವು ಪಾಯಗಳನ್ನು ತೆಗೆದಿದ್ದಾರೆ. ನಾನು ಕಳೆದ 2 ತಿಂಗಳ ಹಿಂದೆ ದಾವಾ ಸ್ವತ್ತಿನ ಬಳಿ ಹೋಗಿದ್ದೆ. ದಾವಾ ಸ್ವತ್ತಿನ ದಕ್ಷಿಣದ ಕಡೆ ಮನೆಗಳನ್ನು ಕಟ್ಟುತ್ತಿದ್ದರು. ಖಾಸಗಿ ಸ್ವತ್ತುಗಳಲ್ಲಿ ಮನೆಗಳನ್ನು ಕಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಇವತ್ತಿಗೆ ನನ್ನ ಬ್ಯಾಂಕ್ ಖಾತೆಯಲ್ಲಿ 7,25,000/- ರೂಗಳು ಇದೆ. ಸದರಿ ಹಣ ಎಸ್ ಬಿ ಐ ಮತ್ತು ಡಿ ಸಿ ಸಿ ಬ್ಯಾಂಕ್ ಖಾತೆಗಳಲ್ಲಿ ಇದೆ. ಎಸ್ ಬಿ ಐ ಖಾತೆಯಲ್ಲಿ 25.09.2025 ಕ್ಕೆ 4,50,000/- ಇತ್ತು. ಕೆ ಸಿ ಡಿ ಸಿ ಸಿ ಬ್ಯಾಂಕ್ ನಲ್ಲಿ 30.09.2025 ಕ್ಕೆ ರೂ 2,70,000/- ಇತ್ತು.

2015 ರಿಂದ 2018 ರ ಅವಧಿಯಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಕರಾರು ಪತ್ರದಲ್ಲಿ ಈ ಖಾತಾ ಮಾಡಿದ ನಂತರ ಕ್ರಯ ಮಾಡುವುದಾಗಿ ಬರೆದಿದೆ. 2015 ರಿಂದ 2018 ರ ಅವಧಿಯ ಬ್ಯಾಂಕ್ ನ ಖಾತೆ ಪಾಸ್ ಬಕ್ ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. 2015 ರಿಂದ 2018 ರ ಅವಧಿಯಲ್ಲಿ ನನ್ನ ಬಳಿ ಸುಮಾರು 3 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಇರುವ ಜಮೀನುಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತೇನೆ, ಹೆಚ್ಚಾಗಿ ನಗದು ವ್ಯವಹಾರು ಮಾಡುತ್ತೇನೆ. ಮೆಣಸಿನ ಕಾಯಿ, ರೇಷ್ಮೆ, ಜೋಳ, ಬಾಳೆ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತೇನೆ. ಕೃಷಿಯಿಂದ ವಾರ್ಷಿಕ 5 ರಿಂದ 6 ಲಕ್ಷ ಆದಾಯ ಇದೆ. ಹಾಗೆ ಆದಾಯ ಇರುವುದನ್ನು ಸಾಬೀತು ಪಡಿಸಲು ನಾನು ದಾಖಲೆಗಳನ್ನು ಸಲ್ಲಿಸಲು ಬರುವುದಿಲ್ಲ. ವಾಣಿಜ್ಯ ಬೆಳೆಗಳನ್ನು ನಾನು ಸುಮಾರು 15 ಎಕರೆ ಜಮೀನಿನಲ್ಲಿ ಬೆಳೆಯುತ್ತೇನೆ. 15 ಎಕರೆ ಜಮೀನಿನಲ್ಲಿ ನಾವು ಇಬ್ಬರು ಅಣ್ಣ ತಮ್ಮಂದಿರು ಉಳುಮೆ ಮಾಡುತ್ತೇವೆ. ಸ.ನಂ. 111/1 ರಲ್ಲಿ 20 ಗುಂಟೆ ಜಮೀನು ಇದೆ, ಸ.ನಂ. 117 ರಲ್ಲಿ 38 ಗುಂಟೆ, ಸ.ನಂ. 136,137,138 ರಲ್ಲಿ 1 ಎಕರೆ ಇದೆ, ಸ.ನಂ. 152/2 ರಲ್ಲಿ 13 ಗುಂಟೆ ಜಮೀನು ಇದೆ, ಸ.ನಂ. 113,114 ರಲ್ಲಿ 3 ಎಕರೆ 20 ಗುಂಟೆ ನನ್ನ ತಾಯಿಯ ಹೆಸರಿನಲ್ಲಿ ಇದೆ, ಸ.ನಂ. 146 ರಲ್ಲಿ 1 ಎಕರೆ 20 ಗುಂಟೆ ನನ್ನ ತಾಯಿಯ ಹೆಸರಿನಲ್ಲಿದೆ. ಸದರಿ ಜಮೀನುಗಳಲ್ಲಿ 4 ಬೋರ್ ವೆಲ್ ಗಳಿವೆ.

21.09.2015 ರಲ್ಲಿ ಪ್ರತಿವಾದಿಗಳಿಗೆ 2 ಲಕ್ಷ ಪಾವತಿ ಮಾಡಿದ ನಂತರ ಪ್ರತಿವಾದಿಗಳು ಮತ್ತೆ ನಿಮ್ಮನ್ನು ಭೇಟಿ ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಮೊದಲು 3 ತಿಂಗಳ ಮೊದಲು ಭೇಟಿ ಮಾಡಿದ್ದರು. ನಾನು ಪ್ರತಿವಾದಿಗಳಿಗೆ ಯಾವುದೇ ನೋಟೀಸನ್ನು ಸಹ ನೀಡಿರಲಿಲ್ಲ.

ಸ.ನಂ. 64/2 ರಲ್ಲಿ ಪ್ರತಿವಾದಿಯೂ 1 ಎಕರೆ 7 ಗುಂಟೆ ಪೈಕಿ 3.04 ಗುಂಟೆ ವಿಸ್ತೀರ್ಣ ಕ್ಕೆ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಪ್ರತಿವಾದಿಯ ನಡುವೆ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ವ್ಯವಹಾರ ನಡೆದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ಧಾರೆ. ಪ್ರತಿವಾದಿಯು ರೂ 11,21,000/-ಕ್ಕೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ ಮತ್ತು ಸಾಕ್ಷಿಗಳ ಸಮಕ್ಷಮ ಮುಂಗಡ ಹಣ ಎಂದು 3 ಲಕ್ಷ ಪಡೆದಿಲ್ಲ ಎಂದರೆ ಸರಿಯಲ್ಲ. ತದನಂತರ 2 ಲಕ್ಷ ಹಣ ಮುಂಗಡವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ದಿ: 10.09.2015 ರಲ್ಲಿ ಕರಾರು ಪತ್ರದ ಬದಲು ಕ್ರಯ ಪತ್ರವನ್ನು ಮಾಡಿಸಿ ಕೊಳ್ಳು ಯಾವುದೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಕರಾರು ಪತ್ರದ ಸಾಕ್ಷಿದಾರರು ಶಾಮೀಲು ಆಗಿ ದಿ: 10.09.2015 ರ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

Sd/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.